## ಕಥೋಪದೇಶ



# ಬೆವರಿನ ದುಡಿಮೆ

ಸಂಗ್ರಹ: ಕು.ಗೀತಾ, ಬೆಂಗಳೂರು.

ಚಿತ್ರ : ಶ್ರೀ ಪಿ. ಪುರುಷೋತ್ತಮ ಕಾರಂತ, ಮಂಗಳೂರು.

ಸಂತರೆಂದು ಪರಿಗಣಿಸಲ್ಪಟ್ಟಿದ್ದ ರಷ್ಯಾದ ಪ್ರಸಿದ್ಧ ಚಿಂತಕ ಕೌಂಟ್ ಲಿಯೋ ಟಾಲ್‌ಸ್ಟಾಯ್ ಯಾವಾಗಲೂ ಅತಿ ಸರಳ ವಸ್ತ್ರ ಧರಿಸುತ್ತಿದ್ದರು. ಒಮ್ಮೆ, ಹಾಗೆ ರೈಲ್ವೆ ಪ್ಲಾಟ್‌ಫಾರ್ಮ್‌ನಲ್ಲಿ ನಿಂತಿದ್ದರು. ಓರ್ವ ಮಹಿಳೆ ಹೀಗೆ ನಿಂತಿದ್ದ ಇವರನ್ನು ಕೂಲಿ ಎಂದು ಭಾವಿಸಿ ಕರೆದು,—"ಈ ಪತ್ರವನ್ನು ಎದುರುಗಡೆ ಹೋಟೆಲಿನಲ್ಲಿ ಇರುವ ನನ್ನ ಪತಿಗೆ ತಲುಪಿಸಿ ಬಾ. ನಿನಗೆ ಎರಡು ರೂಬಲ್ ಕೊಡುತ್ತೇನೆ" ಎಂದಳು. ಯಾವುದೇ ರೀತಿಯಲ್ಲಿ ಪ್ರತಿಕ್ರಿಯೆ ತೋರದೆ, ಓರ್ವ ಸೇವಕನಂತೆ ಟಾಲ್‌ಸ್ಟಾಯ್ ಆ ಪತ್ರವನ್ನು ಆಕೆಯ ಪತಿಗೆ ಕೊಟ್ಟು ಬಂದಾಗ ಆಕೆ ಆತನಿಗೆ ಹಣ ಕೊಟ್ಟಳು.



ಅಷ್ಟರಲ್ಲಿ ಅಲ್ಲಿಗೆ ಬಂದ ಟಾಲ್‌ಸ್ಟಾಯ್‌ನ ಒಬ್ಬ ಮಿತ್ರ ಅವರನ್ನು ಕೌಂಟ್ ಎಂದು ಸಂಬೋಧಿಸಿ ರಷ್ಯನ್ ಸಂಪ್ರದಾಯದಂತೆ ಗೌರವದಿಂದ ಅಭಿವಾದಿಸಿದನು. (ಕೌಂಟ್ ಎಂದರೆ ಶ್ರೀಮಂತ). ಆ ಮಹಿಳೆಗೆ ಆಶ್ಚರ್ಯವಾಗಿ, ಆಕೆ ಆ ಮಿತ್ರನನ್ನು ಕೇಳಿದಳು: "ಯಾರಿವರು?" ಟಾಲ್‌ಸ್ಟಾಯ್‌ರ ಪರಿಚಯವಾಗುತ್ತಲೇ ಆಕೆ ಲಜ್ಜಿತಳಾಗಿ ಕ್ಷಮೆ ಯಾಚಿಸುತ್ತಾ, ತನ್ನ ರೂಬಲ್ ಮರಳಿ ಕೊಡಲು ಕೇಳಿಕೊಂಡಳು. ಟಾಲ್‌ಸ್ಟಾಯ್ ನಗುತ್ತ ಆಕೆಗೆ ಹೇಳಿದರು, "ಕ್ಷಮಿಸುವುದು ಭಗವಂತನ ಕಾರ್ಯ. ನಾನು ದುಡಿದು ಹಣ ಗಳಿಸಿದ್ದೇನೆ. ಬೆವರಿನ ದುಡಿಮೆ ಯಾವಾಗಲೂ ಅಮೂಲ್ಯ. ಅದನ್ನೇಕೆ ಹಿಂದಿರುಗಿಸಲಿ?"